**ನಮೂನೆ - 2A**

# ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

4ನೇ ಅಂತಸ್ತು, ಕಾವೇರಿ ಭವನ, ಕೆ.ಹೆಚ್.ಬಿ. ಕಾ ಂಪ್ಲೆಕ್ಸ್ , ಕೆ.ಜಿ. ರಸ್ತೆ , ಬೆ ಂಗಳೂರು - 09

*******

50 ರೂ . ಛಾಪಾ ಕಾಗದದಲ್ಲಿ ಮಾತ್ರ

## ಕರಾರು ಪತ್ರ

## (ಸಂಪೂರ್ಣವಾಗಿ ಸಹಾಯಧನ ಆಗಿದ್ದಲ್ಲಿ)

## ಈ ಕೆಳಗಿನ ಕರಾರು ಪತ್ರವು

ಈ ದಿವಸ ------------------------- ವಾರ ದಿನಾಂಕ ------------------------- ನೇ ದಿವಸ --------------------ತಿಂಗಳು ------------------ ಇಸ್ವಿಯಲ್ಲಿ ಮಾಡಲ್ಪಟ್ಟಿದೆ.

ಸದರಿ ಕರಾರು ಪತ್ರವು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (ಈ ಸಂಸ್ಥೆಯು 1956ರ ಭಾರತೀಯ ಕಂಪನಿ ಕಾಯಿದೆಗೆ ಒಳಪಟ್ಟಿರುತ್ತದೆ) ಮತ್ತು ಇದರ ನೊಂದಾಯಿಸಲ್ಪಟ್ಟಿರುವ ಮುಖ್ಯ ಕಛೇರಿಯು (ರಿಜಿಸ್ಟರ್ಡ್ ಆಫೀಸ್) 4ನೇ ಅಂತಸ್ತು, ಕಾವೇರಿ ಭವನ, ಕೆ.ಹೆಚ್.ಬಿ. ಕಾಂಪ್ಲೆಕ್ಸ್ , ಕೆ.ಜಿ. ರಸ್ತೆ , ಬೆಂಗಳೂರು - 560 009 ಈ ಸ್ಥಳದಲ್ಲಿ ಇರುತ್ತದೆ. ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ / ಕಾರ್ಯಕಾರಿ ನಿರ್ದೇಶಕರಾಗಿ ಶ್ರೀ ----------------------------------- ಪ್ರತಿನಿಧಿಸುತ್ತಿದ್ದಾರೆ. ಈ ಕರಾರು ಪತ್ರದಲ್ಲಿ ಇನ್ನು ಮುಂದೆ ಮೇಲಿನ ಸಂಸ್ಥೆಯು ಸಂಪೂರ್ಣವಾಗಿ ನಿಗಮ ಎಂದು ಕರೆಯಲ್ಪಡುತ್ತದೆ. (ಇದರ ಅರ್ಥವ್ಯಾಪ್ತಿಯಲ್ಲಿ ಅಂದರೆ ಕರಾರು ವ್ಯಾಪ್ತಿಯಲ್ಲಿ ಎಲ್ಲಿ ಅವಶ್ಯವಿದ್ದಲ್ಲಿ ಸಂಸ್ಥೆಯ ಉತ್ತರಾಧಿಕಾರಿಗಳು ಅಥವಾ ಸಂಸ್ಥೆಯ ಬೇರೆ ಯಾವುದೇ ಅಧಿಕೃತ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. "ನಿಗಮ" ಇದನ್ನು ಮೊದಲನೇ ಭಾಗವೆಂದು, ಮತ್ತು ಶ್ರೀ ----------------------------------- ಅವರ ಪತ್ನಿ ಶ್ರೀಮತಿ ------------------------ (ಪೂರ್ಣ ಹೆಸರು) ಇನ್ನು ಮುಂದೆ ಇವರುಗಳನ್ನು "ಫಲಾನುಭವಿ" ಎಂದು ಕರೆಯಲಾಗುತ್ತದೆ. ("ಫಲಾನುಭವಿ" ಇದರ ಅರ್ಥವ್ಯಾಪ್ತಿಯಲ್ಲಿ ಈ ಕರಾರು ಪತ್ರದ ಯಾವುದೇ ಭಾಗದಲ್ಲಿ, ಸಂದರ್ಭದಲ್ಲಿ, ಉತ್ತರಾಧಿಕಾರಿಗಳು ಅಥವಾ ಈ ಕರಾರು ಪತ್ರದ ಉದ್ದೇಶಕ್ಕಾಗಿ ನೇಮಿಸಿದ ಅಧಿಕೃತ ಪ್ರತಿನಿಧಿಗಳು ಇವರುಗಳನ್ನು ಒಳಗೊಂಡಿರುತ್ತದೆ.) ಸದರಿ ಫಲಾನುಭವಿಯನ್ನು ಎರಡನೇ ಭಾಗವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಸರ್ಕಾರ (ಇನ್ನು ಮುಂದೆ ಸರ್ಕಾರ ಎಂದು ಉಲ್ಲೇಖಿಸಿದೆ) ದಿಂದ ನಿಯೋಜಿತ ಹಂಚಿಕೆ ಮಾಡಿದ ನಿವೇಶನ / ಮನೆ ನಂಬರ್ -------------------- ನೇದ್ದನ್ನು ಸರ್ವೆ ನಂ ------------- (ಪೂರ್ಣ ವಿಳಾಸ) ---------------------------------------------- ---------------------------------------------------------------------------------------------------- ನಿಗಮದವರು ಫಲಾನುಭವಿಗೆ ಕೊಡಲು ನಿಗದಿಪಡಿಸಿದ್ದಾರೆ. ಮತ್ತು ಮನೆಯ ಪೂರ್ಣ ಚಕ್ಕುಬಂದಿಯ ವಿವರವಾದ ಮಾಹಿತಿಯು ಶೆಡ್ಯೂಲದಲ್ಲಿ ವಿವರಿಸಲಾಗಿದೆ. ಮತ್ತು ಸದರಿ ನಿವೇಶನ / ಮನೆಯನ್ನು ನಿಗದಿತ ಫಲಾನುಭವಿಗೆ ಸರ್ಕಾರದ ವಸತಿ ಯೋಜನೆಯಲ್ಲಿ ರೂ. ------------ ------------ ಗಳ ಸರ್ಕಾರದ ಸಹಾಯಧನದಲ್ಲಿ ದೊರೆಕಿಸಿಕೊಡಲಾಗುವುದು ಎಂದು ಉಲ್ಲೇಖಿಸಲಾಗಿದೆ. ಹೀಗೆ ಫಲಾನುಭವಿಗೆ ನೀಡಲಾಗುವ ನಿವೇಶನ / ಮನೆಯನ್ನು ಫಲಾನುಭವಿಯು, ಕಬ್ಜಾ ಪಡೆದ ದಿನಾಂಕದಿಂದ 15 ವರ್ಷಗಳವರೆಗೆ ಯಾವುದೇ ರೀತಿಯಲ್ಲಿ ಪರಭಾರೆ ಮಾಡಬಾರದೆಂಬ ಪರತ್ತಿಗೆ ಫಲಾನುಭವಿಯು ಒಪ್ಪಿದ್ದಾರೆ.

**ಮತ್ತು** ಫಲಾನುಭವಿಯು ಸರ್ಕಾರದ ವತಿಯಿಂದ ದೊರೆಕಿಸಿ ಕೊಡಲ್ಪಡುವ ಸಹಾಯಧನ ರೂ. ---------------------- ಗಳ ವೆಚ್ಚದಲ್ಲಿ ಫಲಾನುಭವಿಯ ಸ್ವಂತ ವಾಸಕ್ಕಾಗಿ ಃ

(ಅ) ನಿಗಮದವರು ತಾವು ನಿರ್ಧರಿಸಿದ ನೀಲಿ ನಕ್ಷೆಯಂತೆ ಮನೆಯನ್ನು ಯಾವುದೇ ಸೂಕ್ತ / ಅನುಮೋದಿತ ಏಜೆನ್ಸಿಯಿಂದ ಕಟ್ಟಿಸುವ ಕಾರ್ಯವನ್ನು ಕೈಗೊಂಡು ಪೂರೈಸುತ್ತಾರೆ

ಅಥವಾ

(ಆ) ಫಲಾನುಭವಿಯು ಸದರಿ ಮನೆಯನ್ನು ಕಟ್ಟುವ / ಕಟ್ಟಿಸುವ ಕಾರ್ಯವನ್ನು ಕೈಗೊಂಡು ನಿಗಮದವರು ನಿಗದಿಪಡಿಸಿದ ಕಾಲಾವಧಿಯಲ್ಲಿ ನಿಗಮದ ಅಪೇಕ್ಷೆಯಂತೆ ಪೂರೈಸುತ್ತಾರೆ ಮತ್ತು ಇದಕ್ಕಾಗಿ ಹಣವನ್ನು 3 ಹಂತಗಳಲ್ಲಿ ಅಂದರೆ ತಳಪಾಯ ಹಾಕಿಸುವ ಸಮಯದಲ್ಲಿ, ಲಿಂಟಲ್‌ವರೆಗೆ ಕಟ್ಟಿಸಿ ಮುಗಿಸಿದಾಗ ಮತ್ತು ಮೂರನೆಯದಾಗಿ ಮನೆ ಮಾಳಿಗೆ ಮುಕ್ತಾಯವಾದಾಗ, ಹೀಗೆ 3 ಕಂತುಗಳಲ್ಲಿ ಸಾಲ ಮತ್ತು ಸಹಾಯಧನ ಒಟ್ಟು ಹಣವನ್ನು ಪಡೆಯುತ್ತಾರೆ.

ಮೇಲಿನ ಎಲ್ಲಾ ಷರತ್ತುಗಳನ್ನು ಒಳಗೊಂಡು ಈ ಕೆಳಕಂಡಂತೆ ಕರಾರು ಪತ್ರವನ್ನು ಮಾಡಲಾಗಿದೆ.

1. ಸದರಿ ಸರ್ಕಾರದ ಸಹಾಯಧನವನ್ನು ಫಲಾನುಭವಿಯು, ಮನೆಯನ್ನು ಕಟ್ಟಲು ಮಾತ್ರ ವಿನಿಯೋಗಿಸಲು ಒಪ್ಪಿಕೊಂಡಿದ್ದಾರೆ.

2. ಸದರಿ ನಿಗಮದವರಿಂದ ಮಂಜೂರಾಗಿ ಬಿಡುಗಡೆಯಾದ ಯಾವತ್ತೂ ಸಹಾಯಧನವನ್ನು ಭಾಗಶಃ ಆಗಲೀ ಬೇರೆ ರೀತಿಯಲ್ಲಾಗಲೀ ಪರಭಾರೆ ಮಾಡಲು ಅಥವಾ ಬೇರೆ ಕೆಲಸ ಕಾರ್ಯಗಳಿಗೆ ವಿನಿಯೋಗಿಸಲು ನಿಗಮದಿಂದ ಒಪ್ಪಿಗೆ ಮತ್ತು ಅನುಮತಿ ಇರುವುದಿಲ್ಲ. ಮತ್ತು ಫಲಾನುಭವಿಯು ನಿಗಮದ ಮಂಜೂರಾತಿ ಪ್ರಕಾರ ಮನೆಯನ್ನು ಕಟ್ಟಲು ಮಾತ್ರ ಉಪಯೋಗ ಮಾಡುವರು ಮತ್ತು ಬೇರೆ ಉದ್ದೇಶಗಳಿಗೆ ವಿನಿಯೋಗಿಸುವುದಿಲ್ಲವೆಂದು ಒಪ್ಪಿಕೊಂಡಿದ್ದಾರೆ.

3. ಫಲಾನುಭವಿಯು ನಿವೇಶನನ ಹಾಗೂ ಕಟ್ಟಡವನ್ನು 31.12.2014 ರವರೆಗೆ ಯಾವುದೇ ರೀತಿಯಲ್ಲಿ ಬೇರೆಯವರಿಗೆ ಬಾಡಿಗೆಗಾಗಲೀ, ಮಾರಾಟವಾಗಲೀ ಅಥವಾ ದೀರ್ಘಾವಧಿ ಕರಾರು / ಭೋಗ್ಯ / ಪಾಲುಗಾರಿಕೆ ಅಥವಾ ಇನ್ನಾವುದೇ ರೂಪದಲ್ಲಿ ಪರಭಾರೆ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ಹಾಗೆ ಮಾಡಿದ್ದಲ್ಲಿ ಫಲಾನುಭವಿಗೆ ಆಸ್ತಿಯ ಮೇಲೆ ಯಾವುದೇ ಹಕ್ಕು ಉಳಿಯುವುದಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಮತ್ತು ಸದರಿ ಅವಧಿಯಲ್ಲಿ ಈ ಆಸ್ತಿಯನ್ನು ಫಲಾನುಭವಿಯಿಂದ ಯಾವುದೇ ರೀತಿಯಿಂದ ಪಡೆದವರಿಗೆ ಆಸ್ತಿಯ ಮೇಲೆ ಯಾವುದೇ ಹಕ್ಕು ಬರುವುದಿಲ್ಲ.

4. ಫಲಾನುಭವಿಯು ವಸತಿಯನ್ನು ಕಟ್ಟಲು ಉದ್ದೇಶಿಸಿರುವ ಸರ್ಕಾರದಿಂದ ಮಂಜೂರಾದ ನಿವೇಶನ / ಮನೆಯ ಮುದ್ರಾಂಕಿತವಾದ / ನೊಂದಾಯಿತ ಕಾಗದ ಪತ್ರಗಳು ಹಾಗೂ ಹಕ್ಕು ಪತ್ರಗಳನ್ನು 31.12.2014 ರವರೆಗೆ ನಿಗಮದಲ್ಲಿ ಒತ್ತೆಯಾಗಿ ಇಡಲು ಒಪ್ಪಿಕೊಂಡಿದ್ದಾರೆ. ಸದರಿ ಹಕ್ಕು ಪತ್ರಗಳನ್ನು ಫಲಾನುಭವಿಗೆ ನಿಗಮವು 01.01.2015 ರಂದು ಮರಳಿ ನೀಡುತ್ತದೆ.

5. ಸರ್ಕಾರದಿಂದ ಮಂಜೂರಾಗಿರುವ ನಿವೇಶನ ಹಾಗೂ ಅಲ್ಲಿ ಕಟ್ಟಿರುವ ವಸತಿ ಇಮಾರತಿ/ಕಟ್ಟಡದ ಮೇಲೆ ನಿಗಮದ ಸ್ವಾಮ್ಯ ಇರುತ್ತದೆ. ಫಲಾನುಭವಿಗೆ ಕೇವಲ ಅದರ ಕಬ್ಜಾ ಮಾತ್ರ ನೀಡಲಾಗುತ್ತದೆ. ಫಲಾನುಭವಿಯು ಈ ಕರಾರು ಪತ್ರದ ಯಾವುದೇ ಕರಾರನ್ನು ಉಲ್ಲಂಘಿಸಿದ ಪ್ರಸಂಗದಲ್ಲಿ , ನಿಗಮದವರು ಫಲಾನುಭವಿಯಿಂದ, ನಿವೇಶನ ಹಾಗೂ ಕಟ್ಟಡವನ್ನು ವಶಪಡಿಸಿಕೊಳ್ಳಲು ಮತ್ತು ನಿಗಮದವರ ಆಯ್ಕೆಯ ಪ್ರಕಾರ ಬೇರೆ ಯಾರಿಗಾದರೂ ಅದೇ ನಿವೇಶನ ಹಾಗೂ ಅದರಲ್ಲಿ ಕಟ್ಟಲಾಗಿರುವ ಇಮಾರತನ್ನು ನೀಡಲು ನಿಗಮದವರಿಗೆ ಅಧಿಕಾರವಿರುತ್ತದೆ ಮತ್ತು ಅಂಥಹ ಪ್ರಸಂಗದದಲ್ಲಿ ಫಲಾನುಭವಿಗೆ ನಿವೇಶನದ ಹಾಗೂ ಅದರಲ್ಲಿ ಕಟ್ಟಲಾಗಿರುವ ಕಟ್ಟಡದ ಮೇಲೆ ಯಾವುದೇ ಅಧಿಕಾರ ಉಳಿಯುವದಿಲ್ಲ ಹಾಗೂ

ಸರ್ಕಾರದ/ನಿಗಮದ ವಿರುದ್ಧವಾಗಿ ಯಾವುದೇ ಅಧಿಕಾರ ಉಳಿಯುವದಿಲ್ಲ ಎಂದು ಈ ಕರಾರಿನ ಪ್ರಕಾರ ಫಲಾನುಭವಿಯು ಒಪ್ಪಿಕೊಂಡಿದ್ದಾರೆ.

6. ಫಲಾನುಭವಿಗೆ ಈ ಕುರಿತು ಚೆನ್ನಾಗಿ ತಿಳುವಳಿಕೆ ಇರುತ್ತದೆ. ಏನೆಂದರೆ ಮನೆಯನ್ನು ಫಲಾನುಭವಿಗೆ ಸ್ವಂತ ವಾಸ ಮತ್ತು ಉದ್ಯೋಗಕ್ಕಾಗಿ ಮಾತ್ರ ನೀಡಲಾಗಿರುತ್ತದೆ. ಒಂದು ವೇಳೆ ಈ ಕಾರಣಕ್ಕಾಗಿ ಮನೆಯನ್ನು ಉಪಯೋಗಿಸದೇ ಬೇರೆ ಯಾವುದೇ ಕಾರಣಕ್ಕಾಗಿ ಉಪಯೋಗಿಸಿದರೆ ಮನೆಯನ್ನು ವಶಪಡಿಸಿಕೊಂಡು ಬೇರೆ ಯಾವುದೇ ರೀತಿಯಿಂದ ನಿರ್ಣಯ ತೆಗೆದುಕೊಳ್ಳಲು ನಿಗಮಕ್ಕೆ ಅಧಿಕಾರ ಇರುತ್ತದೆ ಮತ್ತು ಈ ಕರಾರಿಗೆ ಫಲಾನುಭವಿಯ ಒಪ್ಪಿಗೆ ಇರುತ್ತದೆ.

7. ಈ ಕರಾರು ಪತ್ರದಲ್ಲಿ ಬರೆದಿರುವ ಕರಾರುಗಳನ್ನು ಅರ್ಥೈಸುವಲ್ಲಿ ಯಾವುದೇ ಸಂದೇಹವಿದ್ದಲ್ಲಿ ಅಥವಾ ಫಲಾನುಭವಿಯು ಅಪಾರ್ಥಮಾಡಿಕೊಂಡಲ್ಲಿ ಅಂತಹ ಪ್ರಸಂಗದಲ್ಲಿ ನಿಗಮದವರ ತೀರ್ಮಾನವೇ ಅಂತಿಮವಾಗಿ ಬದ್ಧವಾಗಿರುತ್ತದೆ ಎನ್ನುವುದಕ್ಕೆ ಫಲಾನುಭವಿಯ ಒಪ್ಪಿಗೆ ಇರುತ್ತದೆ.

8. ಈ ಕರಾರು ಪತ್ರದ ಬಗ್ಗೆ ಏನಾದರೂ ವಿವಾದಗಳಿದ್ದರೆ ಅವುಗಳು ಆಯಾ ಅನ್ವಯಿತ ಕೋರ್ಟಿನ ವ್ಯಾಪ್ತಿಯಲ್ಲಿ ಒಳಪಟ್ಟಿರುತ್ತದೆ

**ತಪಶೀಲು**

ಎಲ್ಲಾ ಆಸ್ತಿಯ ಜಾಗ / ಮನೆ ನಂಬರ್. . . . . . . . . . . .. . . . . . . . . . . .. ನಿರ್ಮಾಣವಾಗಿರುವ .. . . . . .. . . . . . .. .

ಅಳತೆಯು ------------------------------

ಪೂರ್ವಕ್ಕೆ :

ಪಶ್ಚಿಮಕ್ಕೆ :

ಉತ್ತರಕ್ಕೆ :

ದಕ್ಷಿಣಕ್ಕೆ :

ಸಾಕ್ಷಿದಾರರ ಸಮಕ್ಷಮದಲ್ಲಿ ಒಪ್ಪಂದವನ್ನು ಮೇಲ್ಕಾಣಿಸಿದ ದಿನಾಂಕದಂದು ಉಭಯತರರು ಒಪ್ಪಿಕೊಂಡಿರುತ್ತಾರೆ.

ನಿಗಮದ ಪರವಾಗಿ

ಸಾಕ್ಷಿದಾರರು (ಸಹಿ ಮತ್ತು ಪೂರ್ಣ ವಿಳಾಸದೊಂದಿಗೆ) ಫಲಾನುಭವಿಯ ಸಹಿ

1.

2.

*************